# ಕೆ.ಎಲ್.ಇ. ಸಂಸ್ಥೆಯ ಕಾನೂನು ಮಹಾವಿದ್ಯಾಲಯ.

## ಚಿಕ್ಕೋಡಿ – 591 201.

Reg.No. BCI/LE/KLESLC/CKDI/KSLUU/701/2009

ಫೋನ್ ನಂ: 08338(O) 274369



**ಉಲ್ಲೇಖ ಸಂಖ್ಯೆ : ಕೆ.ಎಲ್.ಇ. ಎಲ್.ಸಿ/2022-23/** **ದಿನಾಂಕ : 08-07-2023**

ಗೆ,
ಪ್ರಾಚಾರ್ಯರು/ನಿರ್ದೇಶಕರು/ಡೀನ್,

ಮಾನ್ಯರೆ,

ವಿಷಯ : ನಾಲ್ಕನೇಯ ರಾಜ್ಯ ಮಟ್ಟದ ಕನ್ನಡ ಕಲ್ಪಿತ ನ್ಯಾಯಾಲಯ ಸ್ಪರ್ಧೆ
ದಿನಾಂಕ : 12 ಮತ್ತು 13ನೇ ಆಗಸ್ಟ್ 2023.

ಕೆ.ಎಲ್.ಇ. ಸಂಸ್ಥೆಯ ಕಾನೂನು ಅಕಾಡೆಮಿ, ಬೆಳಗಾವಿ ವತಿಯಿಂದ ನಾಲ್ಕನೇಯ ರಾಜ್ಯ ಮಟ್ಟದ ಕನ್ನಡ ಕಲ್ಪಿತ ನ್ಯಾಯಾಲಯ ಸ್ಪರ್ಧೆ ದಿನಾಂಕ 12ನೇ ಮತ್ತು 13ನೇ ಆಗಸ್ಟ-2023 ರಂದು ಕೆ.ಎಲ್.ಇ. ಸಂಸ್ಥೆಯ ಕಾನೂನು ಮಹಾವಿದ್ಯಾಲಯ, ಚಿಕ್ಕೋಡಿಯಲ್ಲಿ ಏರ್ಪಡಿಸುತ್ತಿದೆ ಎಂದು ತಿಳಿಸಲು ಸಂತೋಷವೆನಿಸುತ್ತದೆ. ಈ ಸ್ಪರ್ಧೆಯ ಯಶಸ್ಸಿಗೆ ತಮ್ಮೆಲ್ಲರ ಸಹಕಾರ ಅತ್ಯಮೂಲ್ಯ, ತಮ್ಮ ಮಹಾವಿದ್ಯಾಲಯದ ತಂಡವನ್ನು ಈ ಸ್ಪರ್ಧೆಯಲ್ಲಿ ಭಾಗವಹಿಸಲು ಆಮಂತ್ರಿಸುತ್ತಿದ್ದೇವೆ. ಕಲ್ಪಿತ ನ್ಯಾಯಾಲಯ ಸ್ಪರ್ಧೆಯ ಸಮಸ್ಯೆಯನ್ನು, ನಿಯಮಗಳನ್ನು, ನೋಂದಣಿ ಪತ್ರ ಮತ್ತು ಪ್ರಯಾಣ ವಿವರಗಳ ಪತ್ರ ಈ ಪತ್ರದೊಂದಿಗೆ ಲಗತ್ತಿಸಿದೆ.

ಹೆಚ್ಚಿನ ಮಾಹಿತಿಗಾಗಿ ತಾವು ಈ ಕೆಳಗಿನವರನ್ನು ಸಂಪರ್ಕಿಸಬಹುದು.

1. ಪ್ರೋ (ಶ್ರೀಮತಿ) ಲತಾ ಸರದಾರ (ಸಂಯೋಜನಾಧಿಕಾರಿ) **8277672884**
2. ಪ್ರೊ. ಪಿ. ಎಂ. ಕಾಮತೆ **9632424591**
3. ಶ್ರೀ. ಶ್ರೀಧರ ಶಿರಹಟ್ಟಿ (ವಸತಿ ಹಾಗೂ ಸಾರಿಗೆ ವ್ಯವಸ್ಥಾಧಿಕಾರಿ) **9739238804**
4. ಕುಮಾರ. ವೀರನಗೌಡ ಪಾಟೀಲ (ವಿದ್ಯಾರ್ಥಿ ಪ್ರತಿನಿಧಿ) **7337651096**
5. ಕುಮಾರಿ. ರಿತಿಕಾ ಮೆಹತಾ (ವಿದ್ಯಾರ್ಥಿ ಕಾರ್ಯದರ್ಶಿ) **7819946192**

ಸಂಪರ್ಕಿಸಲು ವಿಳಾಸ : ಪ್ರಾಚಾರ್ಯರು,
ಕೆ.ಎಲ್.ಇ. ಸಂಸ್ಥೆಯ ಕಾನೂನು ಮಹಾವಿದ್ಯಾಲಯ,
ಚಿಕ್ಕೋಡಿ – 591 201.
ಫೋನ ನಂ : 08338-274369
ಮೋ ನಂ : 7795664708
ಇ-ಮೇಲ್ : kleslc5_ckd@yahoo.com
ವೆಬ್ ಸೈಟ್ : www.klelcchikodi.org

ಧನ್ಯವಾದಗಳೊಂದಿಗೆ,

ತಮ್ಮ ವಿಶ್ವಾಸಿ,

ಪ್ರಾಚಾರ್ಯರು

:: ಸಂಯೋಜಕರು ::
ಕೆ.ಎಲ್.ಇ. ಸಂಸ್ಥೆಯ ಕಾನೂನು ಮಹಾವಿದ್ಯಾಲಯ, ಚಿಕ್ಕೋಡಿ.

**ಕೆ.ಎಲ್.ಇ. ಸಂಸ್ಥೆಯ  ಕಾನೂನು ಮಹಾವಿದ್ಯಾಲಯ.**

**ಚಿಕ್ಕೋಡಿ – 591 201.**

**ಕೆ.ಎಲ್.ಇ. ಕಾನೂನು ಅಕಾಡೆಮಿ, ಬೆಳಗಾವಿ.**

**ನಾಲ್ಕನೆಯ ರಾಜ್ಯಮಟ್ಟದ ಕನ್ನಡ ಕಲ್ಪಿತ ನ್ಯಾಯಾಲಯ ಸ್ಪರ್ಧೆ -2023**



Reg.No. BCI/LE/KLESLC/CKDI/KSLUU/701/2009 ಫೋನ್ ನಂ: 08338(O) 274369

---

## ಕೆ.ಎಲ್.ಇ. ಸಂಸ್ಥೆಯ ಕುರಿತು

2016ನೇ ವರ್ಷವನ್ನು ಕೆ.ಎಲ್.ಇ. ಸಂಸ್ಥೆ ಶತಮಾನೋತ್ಸವ ಸಂಭ್ರಮವನ್ನಾಗಿ ಆಚರಿಸಿದೆ. ಈ ಸುಸಮಯದಲ್ಲಿ ಕನ್ನಡ ನೆಲವನ್ನು ದಾಟಿ ಮುಂಬಯಿ, ದೆಹಲಿ, ಮಲೇಶಿಯಾ, ಯುಎಇ, ಇಂಗ್ಲೆಂಡ ಅಮೇರಿಕ ದೇಶಗಳ ಸ್ಥಳಗಳಲ್ಲಿ ತನ್ನ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿ ಮುನ್ನುಗ್ಗುತ್ತಿರುವುದು ಹೆಗ್ಗಳಿಕೆ ಎಂದೇ ಹೇಳಬೇಕು.

ಪುಟ್ಟ ಶಾಲೆಯಿಂದ ಪ್ರಾರಂಭವಾದ ಕೆ.ಎಲ್.ಇ. ಸಂಸ್ಥೆ, ಇಂದು ಸಾಗರದಾಚೆ ತನ್ನ ಚೊಚ್ಚಲು ಶಾಲೆಯೊಂದನ್ನು ಪ್ರಾರಂಭಿಸಿದೆ. ಇಂದು 295 ಅಂಗ ಸಂಸ್ಥೆಗಳನ್ನು ಯಶಸ್ವಿಯಾಗಿ ಮುನ್ನಡೆಸುತ್ತಿದೆ. ಇದು ಸಮಸ್ತ ಕೆ.ಎಲ್.ಇ. ಸಂಸ್ಥೆಗೆ, ಕನ್ನಡ ಕುಲಕೋಟಿಗೆ ಹೆಮ್ಮೆಯನ್ನುಂಟು ಮಾಡಿದ ಘಳಿಗೆ.

ಭಾರತೀಯ ಶಿಕ್ಷಣ ಸಂಸ್ಥೆಯೊಂದು ವಿದೇಶಿ ನೆಲದಲ್ಲಿ ಶೈಕ್ಷಣಿಕ ಬೇರುಗಳನ್ನು ಬಿಡುವುದು ಸುಲಭದ ಮಾತಲ್ಲ. ಒಂದು ಕಾಲವಿತ್ತು, ಭಾರತೀಯರು ಉತ್ತಮ ಶಿಕ್ಷಣವನ್ನು ಅರಸಿಕೊಂಡು ವಿದೇಶಗಳಿಗೆ ಹೋಗುತ್ತಿದ್ದರು. ಪ್ರಾಚೀನ ಭಾರತದ ಶೈಕ್ಷಣಿಕ ಇತಿಹಾಸದಲ್ಲಿ ನಳಂದಾ ಹಾಗೂ ತಕ್ಷಶಿಲಾ ವಿದ್ಯಾಕೇಂದ್ರಗಳು ಏಶಿಯಾದ ಎಲ್ಲ ರಾಷ್ಟ್ರಗಳನ್ನು ಆಕರ್ಷಿಸಿದ್ದವು. ಅಲ್ಲಿಯ ಗುಣಮಟ್ಟದ ಶಿಕ್ಷಣವನ್ನು ಪಡೆಯುವುದಕ್ಕಾಗಿ ಹಲವಾರು ದೇಶಗಳ ವಿದ್ಯಾರ್ಥಿಗಳು ಆಗಮಿಸುತ್ತಿದ್ದರು. ಕರ್ನಾಟಕದಲ್ಲಿಯೂ ಅಗ್ರಹಾರ, ಬ್ರಹ್ಮಪುರಿಗಳು, ಮಠಗಳು ವಿದ್ಯಾಕೇಂದ್ರಗಳಾಗಿ ಕಾರ್ಯನಿರ್ವಹಿಸುತ್ತಿದ್ದವು. ಕರ್ನಾಟಕದ ಕೋಡಿಮಠ ಪ್ರಾಚೀನ ವಿದ್ಯಾಕೇಂದ್ರಗಳಲ್ಲಿ ಒಂದಾಗಿತ್ತು.  ಬ್ರಿಟಿಷರ ಆಗಮನ ಇಲ್ಲಿನ ಶೈಕ್ಷಣಿಕ ವಾತಾವರಣದಲ್ಲಿ ಹೊಸಗಾಳಿ ಬೀಸಿತು.  ಸಾಂಪ್ರದಾಯಿಕ ಶಿಕ್ಷಣ ಕ್ರಮ ದೂರಸರಿಯಿತು. ಅದರ ಫಲವಾಗಿ ವಿಶ್ವವಿದ್ಯಾಲಯಗಳು ಅನಾವರಣಗೊಂಡವು. ವಿಲಾಯಿತಿಯಲ್ಲಿ ಶಿಕ್ಷಣ ಪಡೆಯುವುದು ಶ್ರೀಮಂತ ಕುಟುಂಬಗಳ ಶೋಕಿಯಾದರೆ, ಬಡತನದಲ್ಲಿಯೂ ಕಷ್ಟಪಟ್ಟು ವಿದೇಶಿ ಶಿಕ್ಷಣ ಪಡೆದವರೂ ಇದ್ದರು. ಆದರೆ ಇಂದು ಸ್ವತಂತ್ರ ಭಾರತ ಶೈಕ್ಷಣಿಕವಾಗಿ ಅಗಾಧವಾದದ್ದನ್ನು ಸಾಧಿಸಿದೆ. ಭಾರತದತ್ತ ಶಿಕ್ಷಣ ಅರಸಿಕೊಂಡು ಬರುವ ವಾತಾವರಣವನ್ನು ವಿದೇಶಿಗರಿಗೆ ನಿರ್ಮಿಸಿದೆ. ಅಂತೆಯೆ ರಾಷ್ಟ್ರಗಳಲ್ಲಿ ಭಾರತೀಯ ಶಿಕ್ಷಣ ಶಾಲೆಗಳು ತಲೆಯತ್ತುವಂತೆ ಮಾಡಿದೆ.

ಪ್ರಸ್ತುತ ದುಬೈಯಲ್ಲಿ ಭಾರತೀಯ ಸಿಬಿಎಸ್‌ಸಿ ಪಠ್ಯಕ್ರಮದ ಅರವತ್ತಕ್ಕೂ ಹೆಚ್ಚು ಶಾಲೆಗಳು ಕಾರ್ಯನಿರ್ವಹಿಸುತ್ತಿವೆ. ಕೆ.ಎಲ್.ಇ. ಸಂಸ್ಥೆಯು ತನ್ನ ಚೊಚ್ಚಲು ಶಾಲೆಯೊಂದನ್ನು ತೆರೆಯುವ ಮೂಲಕ ವಿಕ್ರಮ ಒಂದನ್ನು ಸಾಧಿಸಿದೆ. ಕೆ.ಎಲ್.ಇ. ಸಂಸ್ಥೆಯನ್ನು ಸ್ಥಾಪಿಸಿದ ಏಳು ಜನ ಶಿಕ್ಷಕರು ಪುಣೆ, ಮುಂಬಯಿಗಳಲ್ಲಿ ಕಲಿತು, ನಮ್ಮ ಕನ್ನಡ ಮಕ್ಕಳಿಗೂ ಶಿಕ್ಷಣ ನೀಡಬೇಕೆಂಬ ಆಶಯ 1916 ರಲ್ಲಿ ಸಾಕಾರಗೊಂಡಿತು. ಬೆಳಗಾವಿಯ ಪರಿಸರದಲ್ಲಿ ಶಾಲೆಯೊಂದು ಪ್ರಾರಂಭಗೊಂಡಿತು. ಇಂದು ಕೆ.ಎಲ್.ಇ. ದೇಶದ್ದುದಗಲಕ್ಕೂ ವಿಸ್ತಾರೋನ್ನತವಾಗಿ ಬೆಳೆದು ನಿಂತಿದೆ. ವಿದೇಶ ನೆಲದಲ್ಲೂ ಗುರುತಿಸಿಕೊಂಡಿದೆ. ದುಬೈಯಲ್ಲಿ ನೂತನವಾಗಿ ನಿರ್ಮಾಣಗೊಂಡ ಶಾಲೆ ಅತ್ಯಾಧುನಿಕ ಶೈಕ್ಷಣಿಕ ಸೌಲಭ್ಯಗಳನ್ನು ಹೊಂದಿದೆ. ಭಾರತೀಯ ಶಿಕ್ಷಕರೆ ಅಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಮುಂಬರುವ ದಿನಗಳಲ್ಲಿ ಸಂಸ್ಥೆ ಕೊಲ್ಲಿ ರಾಷ್ಟ್ರಗಳಲ್ಲಿ ಇನ್ನೂ ಹಲವು ಶಾಲೆಗಳನ್ನು ಪ್ರಾರಂಭಿಸಲು ಉತ್ಸುಕವಾಗಿದೆ. ಅಲ್ಲಿ ಭಾರತೀಯ ಶಾಲೆಗಳನ್ನು ಪ್ರಾರಂಭಿಸುವ ಮೂಲಕ ನಮ್ಮ ಸಂಸ್ಕೃತಿ ಪರಂಪರೆಯನ್ನು ಉಳಿಸಿ ಬೆಳೆಸುವ ಕಾರ್ಯಮಾಡಲಿದೆ.  ಕೆ.ಎಲ್.ಇ. ಸಂಸ್ಥೆಯ ಈ ಶೈಕ್ಷಣಿಕ ಯಾತ್ರೆ ವಿಶ್ವಾದ್ಯಂತ ಹರಡಲಿ ಎಂಬುವುದೇ ಭಾರತೀಯರ ಹಾರೈಕೆ.

# ಕೆ.ಎಲ್.ಇ. ಸಂಸ್ಥೆಯ ಕಾನೂನು ಅಕಾಡೆಮಿ

ಕೆ.ಎಲ್.ಇ. ಸಂಸ್ಥೆಯು ಬಲವಾದ ಪೋಷಕರ ಆಶ್ರಯದ ಅಡಿಯಲ್ಲಿ ಕೆ.ಎಲ್.ಇ. ಸಂಸ್ಥೆಯ ಕಾನೂನು ಅಕಾಡೆಮಿ ಶೈಕ್ಷಣಿಕ ಕ್ಷೇತ್ರದಲ್ಲಿ ಶ್ರೇಷ್ಠತೆಗಳ ವ್ಯಾಪ್ತಿಯನ್ನು ತಲುಪಲು ನಿರಂತರವಾಗಿ ಶ್ರಮಿಸುತ್ತದೆ, ಸಂಸ್ಥೆಯ ಜ್ಞಾನದ ಮೂಲಗಳನ್ನು ಮತ್ತು ತಾಂತ್ರಿಕತೆಯನ್ನು ಕೇವಲ ಸಮರ್ಥ ಮತ್ತು ಪ್ರಗತಿಪರ ಸಮುದಾಯವನ್ನು ಭದ್ರವಾಗಿ ಬಲಪಡಿಸುತ್ತದೆ. ಕೆ.ಎಲ್.ಇ. ಸಂಸ್ಥೆಯ ಕಾನೂನು ಅಕಾಡೆಮಿ ಆರು ಕಾನೂನು ಕಾಲೇಜುಗಳಲ್ಲಿ ತನ್ನ ಗ್ರಹಣಾಂಗಗಳನ್ನು ಹೊಂದಿದ್ದು ಉನ್ನತ ಗುರಿಗಳನ್ನು ಹೊಂದಲು ಮುಂಚುಣಿಯಲ್ಲಿದೆ.

ಒಂದು ಪ್ರತ್ಯೇಕ ಸಂಸ್ಥೆಯು ಜಾಗತಿಕ ಸನ್ನಿವೇಶದಲ್ಲಿ ನಿಭಾಯಿಸಲು ಕಷ್ಟದಾಯಕವಾಗಬಹುದು. ಆದ್ದರಿಂದ ಸಾಮೂಹಿಕ ವಿಧಾನವು ಅತ್ಯಗತ್ಯವಾಗಿದೆ. ಈ ದಿಕ್ಕಿನಲ್ಲಿ ಕೆ.ಎಲ್.ಇ. ಸಂಸ್ಥೆಯ ಎಲ್ಲಾ ಆರು ಕಾನೂನು ಮಹಾವಿದ್ಯಾಲಯ ಕೆ.ಎಲ್.ಇ. ಕಾನೂನು ಅಕಾಡೆಮಿ ಅಡಿಯಲ್ಲಿ ಒಟ್ಟಿಗೆ ಸೇರಿದೆ. ಕೆ.ಎಲ್.ಇ. ಸಂಸ್ಥೆಯ ಕಾನೂನು ಆಕಾಡೆಮಿ ಈ ಕೆಳಗಿನ ಕಾನೂನು ಮಹಾವಿದ್ಯಾಲಯಗಳನ್ನು ಒಳಗೊಂಡಿದೆ.

1) ಕೆ.ಎಲ್.ಇ. ಸಂಸ್ಥೆಯ ಜಿ. ಕೆ. ಕಾನೂನು ಮಹಾವಿದ್ಯಾಲಯ, ಹುಬ್ಬಳ್ಳಿ.
2) ಕೆ.ಎಲ್.ಇ. ಸಂಸ್ಥೆಯ ಎಸ್. ಎ. ಮಾನ್ವಿ ಕಾನೂನು ಮಹಾವಿದ್ಯಾಲಯ, ಗದಗ.
3) ಕೆ.ಎಲ್.ಇ. ಸಂಸ್ಥೆಯ ಬಿ. ವಿ. ಬೆಲ್ಲದ ಕಾನೂನು ಮಹಾವಿದ್ಯಾಲಯ, ಬೆಳಗಾವಿ.
4) ಕೆ.ಎಲ್.ಇ. ಸಂಸ್ಥೆಯ ಕಾನೂನು ಮಹಾವಿದ್ಯಾಲಯ, ಬೆಂಗಳೂರು.
5) ಕೆ.ಎಲ್.ಇ. ಸಂಸ್ಥೆಯ ಕಾನೂನು ಮಹಾವಿದ್ಯಾಲಯ, ಚಿಕ್ಕೋಡಿ.
6) ಕೆ.ಎಲ್.ಇ. ಸಂಸ್ಥೆಯ ಕಾನೂನು ಮಹಾವಿದ್ಯಾಲಯ, ನವಿ-ಮುಂಬಯಿ.

**ಉದ್ದೇಶಗಳು:**

1. ಕಾರ್ಯಾಗಾರಗಳು, ಸಮ್ಮೇಳನಗಳು, ಸೆಮಿನಾರ್, ವಿಚಾರ ಸಂಕೀರ್ಣ, ಚರ್ಚಾ ಗೋಷ್ಠಿ, ಆಶುಭಾಷಣ, ಕ್ರೀಡೆಗಳು ದೂರದೃಷ್ಟಿಕೋನ ಇತ್ಯಾದಿಗಳನ್ನು ನಡೆಸುವ ಮೂಲಕ ಸಂಸ್ಥೆಯು ಜ್ಞಾನದ ಮೂಲವನ್ನು ವರ್ಧಿಸುವುದು.
2. ಕಾನೂನು ಜ್ಞಾನಪ್ರಸಾರ ಕಾರ್ಯಕ್ರಮಗಳನ್ನು ಏರ್ಪಡಿಸುವುದು ಮತ್ತು ಕಾನೂನು ನಿಯತಕಾಲಿಕೆಗಳನ್ನು ಪ್ರಕಟಿಸುವುದು.
3. ವಿದ್ಯಾರ್ಥಿಗಳ ಸಂಶೋಧನಾ ಕೌಶಲ್ಯಗಳನ್ನು ಹೆಚ್ಚಿಸಲು ರಾಜ್ಯ ಹಾಗೂ ರಾಷ್ಟ್ರ ಮಟ್ಟದಲ್ಲಿ ಕಲ್ಪಿತ ನ್ಯಾಯಾಲಯ ಸ್ಪರ್ಧೆ, ಅಣಕು ನ್ಯಾಯಾಲಯ ಸ್ಪರ್ಧೆ, ಕಾನೂನು ಉತ್ಸವ ಏರ್ಪಡಿಸುವುದು.

ಅಕಾಡೆಮಿಯ ಸರಿಯಾದ ಕಾರ್ಯನಿರ್ವಹಣೆಗಾಗಿ ಬೆಳಗಾವಿಯ ಬಿ.ವಿ.ಬೆಲ್ಲದ ಕಾನೂನು ಮಹಾವಿದ್ಯಾಲಯದಲ್ಲಿ ಪ್ರಧಾನ ಕಾರ್ಯಾಲಯ ಗುರುತಿಸಲಾಗಿದೆ. ಕೆ.ಎಲ್.ಇ. ಸಂಸ್ಥೆಯ ಕಾನೂನು ಮಹಾವಿದ್ಯಾಲಯಗಳ ಎಲ್ಲ ಪ್ರಾಂಶುಪಾಲರು & ಸಿಬ್ಬಂದಿಯು ಅಕಾಡೆಮಿಯ ಸಕ್ರಿಯ ಸದಸ್ಯರಾಗಿದ್ದಾರೆ.

## ಚಿಕ್ಕೋಡಿ ಕುರಿತು

ಚಿಕ್ಕೋಡಿ ಪಟ್ಟಣವು ತನ್ನದೇ ಆದ ಐತಿಹಾಸಿಕ ಹಿನ್ನಲೆ ಪಡೆದುಕೊಂಡಿದೆ. ಚಿಕ್ಕೋಡಿಯು ಪ್ರಾಚೀನ ಕಾಲದಲ್ಲಿ ಅಂದರೆ 12ನೇ ಶತಮಾನದಲ್ಲಿ ಮಹಾ ವೈರಾಗ್ಯನಿಧಿಯಾದ ಅಲ್ಲಮ ಪ್ರಭುಗಳು ಬಂದು ಹೋದ ಪುಣ್ಯ ಭೂಮಿ ಇದಾಗಿದೆ. ರಾಮಾಯಣ ಕಾಲದ ರಾಮ ಲಕ್ಷ್ಮಣ ಮತ್ತು ಸೀತೆ ಎಂಬ 3 ಲಿಂಗಗಳನ್ನೊಳಗೊಂಡ ಐತಿಹಾಸಿಕ ಮಹಾದೇವ ದೇವಸ್ಥಾನ ಇದಾಗಿದೆ. ಅಷ್ಟೇ ಅಲ್ಲದೇ ಸವದತ್ತಿಯ ರಟ್ಟರ ಕಾಲದಲ್ಲಿ ಚಿಕ್ಕ-ಕೋಡಿ & ಹೀರೆಕೋಡಿ ಎಂಬ ಗ್ರಾಮಗಳನ್ನು ಗುರುತಿಸಿದವರಾಗಿದ್ದರು. ಚಿಕ್ಕ-ಕೋಡಿ ಬದಲಾವಣೆ ಹೊಂದಿ ಚಿಕ್ಕೋಡಿ ಎಂದು ನಾಮಕರಣಗೊಂಡು ಸುಮಾರು ವರ್ಷಗಳ ಹಿಂದೆ ಚಿಕ್ಕೋಡಿ ಪಟ್ಟಣದ ಮದ್ಯದ ಹಳ್ಳವು ಚಕ್ಕೊತಾ ನದಿಯಾಗಿತ್ತು, ಸ್ವಚ್ಛ ತಿಳಿನೀರಿನಿಂದ ಹರಿಯುತ್ತಿತ್ತು, ಆ ನದಿಯ ದಡದಲ್ಲಿ 365 ವರ್ಷಗಳ ಹಿಂದೆ ಶ್ರೀ ದತ್ತ ದೇವಸ್ಥಾನದ ಪಾದಿಕೆಗಳನ್ನು ಪ್ರತಿಸ್ಥಾಪಣೆ ಮಾಡಿದ ಕೀರ್ತಿಯನ್ನು ಹೊಂದಿದೆ. ನರಸಿಂಹವಾಡಿ ಕ್ಷೇತ್ರದಲ್ಲಿ ಮತ್ತು ಈ ಕ್ಷೇತ್ರದಲ್ಲಿ ಏಕಕಾಲಕ್ಕೆ ಪೂಜೆ ಆರತಿ ನಡೆಯುತ್ತದೆ. ಜಗದ್ಗುರು ಆದಿ ಶಂಕರಾಚಾರ್ಯರು ಭೇಟಿ ನೀಡಿದ ಹಿನ್ನಲೆಯಲ್ಲಿ ಇದೊಂದು ಪವಿತ್ರ ಕ್ಷೇತ್ರವಾಗಿದೆ. ಇಷ್ಟೆ ಅಲ್ಲದೆ ಚಿಕ್ಕೋಡಿ ಸಿವ್ಹಿಲ್ ನ್ಯಾಯಾಲಯದಲ್ಲಿ ಸಂವಿಧಾನದ ಶಿಲ್ಪಿಯಾದ ಡಾ॥ ಬಿ.ಆರ್.ಅಂಬೇಡ್ಕರ ಮತ್ತು ಚಿಕ್ಕೋಡಿಯ ಶ್ರೀಯುತ ಗಾಂಧಿ ವಕೀಲರು ವಾದ ಪ್ರತಿವಾದ ಮಂಡಿಸಿದ ಸ್ಥಳವಾಗಿದೆ. ಪರಟಿನಾಗಲಿಂಗೇಶ್ವರ ದೇವಸ್ಥಾನಕ್ಕೆ ಒಂದು ಹಿನ್ನಲೆ ಇದೆ. ಚಿಕ್ಕೋಡಿಯ ಕುರುಬ ಜನಾಂಗದ ಭಕ್ತ ಧ್ಯಾನ, ತಪಸ್ಸು ಮಾಡಿ ಅವನು ಪರಟಿಯಲ್ಲಿ ಊಟಮಾಡುವುದು ಒಂದು ಹಿನ್ನಲೆಯಿಂದ ಆ ದೇವಸ್ಥಾನ ಪ್ರಸಿದ್ಧಿ ಹೊಂದಿದೆ. ಹಾಗೂ ಚಿಕ್ಕೋಡಿಯ ಪಟ್ಟಣದ ಮಧ್ಯ ಭಾಗದಲ್ಲಿರುವ ಶ್ರೀ ವೆಂಕಟೇಶ ದೇವಸ್ಥಾನವು ಐತಿಹಾಸಿಕ ಹಿನ್ನಲೆಯನ್ನು ಹೊಂದಿದೆ.

## ಮಹಾವಿದ್ಯಾಲಯದ ಕಿರು ಪರಿಚಯ

ಕೆ.ಎಲ್.ಇ. ಸಂಸ್ಥೆಯ ಕಾನೂನು ಮಹಾವಿದ್ಯಾಲಯ, ಚಿಕ್ಕೋಡಿ ಇದು 1999 ರಲ್ಲಿ ರಾಜಸ್ಥಾನದ ಉಚ್ಛ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರಾದ ಗೌರವಾನ್ವಿತ ನ್ಯಾಯಮೂರ್ತಿ ಡಾ॥ ಶಿವರಾಜ ಪಾಟೀಲ ಇವರ ಅಮೃತ ಹಸ್ತದಿಂದ ಪ್ರಾರಂಭವಾಯಿತು. ಗ್ರಾಮೀಣ ಮತ್ತು ಬಡ ವಿದ್ಯಾರ್ಥಿಗಳಿಗೆ ಉನ್ನತ ಮಟ್ಟದ ಶೈಕ್ಷಣಿಕ ಹಕ್ಕನ್ನು ಒದಗಿಸುವ ಮತ್ತು ಸಾಮಾಜಿಕ ಆರ್ಥಿಕ ಹಕ್ಕುಗಳ ಅರಿವನ್ನು ಮೂಡಿಸಿ ಉತ್ತಮ ಸಮಾಜದ ನಿರ್ಮಾತೃಗಳನ್ನು ನಿರ್ಮಿಸುವ ಉದ್ದೇಶಗಳೊಂದಿಗೆ ಕಾನೂನು ಶಿಕ್ಷಣ ನೀಡುವ ವಿದ್ಯಾ ಸಂಸ್ಥೆಯನ್ನು ಸನ್ಮಾನ್ಯ ಪ್ರಭಾಕರ ಬ. ಕೋರೆ ರಾಜ್ಯ ಸಭಾ ಸದಸ್ಯರು ಹಾಗೂ ಕೆ.ಎಲ್.ಇ. ಸಂಸ್ಥೆಯ ಬೆಳಗಾವಿಯ ಕಾರ್ಯಾಧ್ಯಕ್ಷರ ಹೆಮ್ಮೆಯ ಕನಸಾಗಿತ್ತು. ಅದೇ ರೀತಿ ಅವರ ಕನಸು ಇಂದು ನನಸಾಗಿ ಸಸಿಯಂದ ಹೆಮ್ಮರವಾಗಿ ಬೆಳೆದು ನಿಂತಿದೆ.

ಮಹಾವಿದ್ಯಾಲಯದ ಮುಖ್ಯ ಉದ್ದೇಶವು "ಗುಣಮಟ್ಟದ ಕಾನೂನು ಶಿಕ್ಷಣವನ್ನು ಒದಗಿಸುವದು ಮತ್ತು ಉತ್ತಮ ನ್ಯಾಯವಾದಿಗಳನ್ನು ರೂಪಿಸುವುದಾಗಿದೆ. ಮಹಾವಿದ್ಯಾಲಯವು 3 ವರ್ಷದ ಮತ್ತು 5 ವರ್ಷದ ಕಾನೂನು ಶಿಕ್ಷಣವನ್ನು ನೀಡುತ್ತಿದ್ದು ಸುಸಜ್ಜಿತವಾದ ತಾಂತ್ರಿಕತೆಯನ್ನು ಹೊಂದಿದ ಕೊಠಡಿಗಳನ್ನು, ಅಂತರಜಾಲ ಸೌಲಭ್ಯಗಳನ್ನೊಳಗೊಂಡ ಗಣಕಯಂತ್ರದ ಪ್ರಯೋಗಾಲಯ, ಉತ್ತಮ ಗುಣಮಟ್ಟದ ಇ-ಗ್ರಂಥಾಲಯ, ಕಲ್ಪಿತ ನ್ಯಾಯಾಲಯ ಕೊಠಡಿ ಹೊಂದಿದೆ. ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಪ್ರತ್ಯೇಕವಾದ ವಸತಿ ನಿಲಯ, ಕ್ರೀಡಾಂಗಣವನ್ನು ಒಳಗೊಂಡಿದೆ. 2003-2004 ರಿಂದ ಸತತವಾಗಿ ಮಹಾವಿದ್ಯಾಲಯದ ವಿದ್ಯಾರ್ಥಿಗಳು ವಿಶ್ವ ವಿದ್ಯಾಲಯಗಳು ನಡೆಸುವ ಪರೀಕ್ಷೆಗಳಲ್ಲಿ ವಿವಿಧ ಶ್ರೇಯಾಂಕಗಳನ್ನು ಪಡೆಯುತ್ತಾರೆ. ನಮ್ಮ ಮಹಾವಿದ್ಯಾಲಯದ 24 ವಿದ್ಯಾರ್ಥಿಗಳು ನ್ಯಾಯಾಂಗ ವಿಭಾಗದಲ್ಲಿ ನ್ಯಾಯಾಧೀಶರಾಗಿ ನೇಮಕಗೊಂಡು ಕಾರ್ಯನಿರ್ವಹಿಸುತ್ತಿದ್ದಾರೆ ಮತ್ತು ಮಹಾವಿದ್ಯಾಲಯವು ವಿವಿಧ ವಿಷಯಗಳಲ್ಲಿ ಪರಿಣಿತ ಹೊಂದಿದ ಭೋದಕ ವೃಂದವನ್ನು ಹೊಂದಿದೆ.

ರಾಷ್ಟ್ರ ಹಾಗೂ ರಾಜ್ಯ ಮಟ್ಟದ ಕಲ್ಪಿತ ನ್ಯಾಯಾಲಯ ಸ್ಪರ್ಧೆ, ರಾಜ್ಯ ಮಟ್ಟದ ಕಾರ್ಯಗಾರ ಮತ್ತು ಕಾನೂನು ಅರಿವು ನೆರವು ಕಾರ್ಯಕ್ರಮ ವಿಶೇಷ ಉಪನ್ಯಾಸಗಳನ್ನು ವಿವಿಧ ಪ್ರಚಲಿತ ವಿಷಯಗಳ ಮೇಲೆ ಮಹಾವಿದ್ಯಾಲಯವು ಕಾರ್ಯಕ್ರಮಗಳನ್ನು ಆಯೋಜಿಸುತ್ತಿದೆ.

## ಕಲ್ಪಿತ ನ್ಯಾಯಾಲಯ ಸ್ಪರ್ಧೆಗೆ ಸಂಬಂಧಿಸಿದ ನಿಯಮಗಳು

**ಸಾಮಾನ್ಯ ನಿಯಮಗಳು:**

1) ಭಾರತದ ವಕೀಲ ಪರಿಷತ್‌ನಿಂದ ಮಾನ್ಯತೆ ಪಡೆದ ಕರ್ನಾಟಕ ರಾಜ್ಯದಲ್ಲಿಯ ಎಲ್ಲ ಕಾನೂನು ಮಹಾವಿದ್ಯಾಲಯಗಳು ಈ ಸ್ಪರ್ಧೆಯಲ್ಲಿ ಭಾಗವಹಿಸಲು ಅರ್ಹತೆಯನ್ನು ಹೊಂದಿರುತ್ತವೆ.
2) ಸ್ಪರ್ಧೆಯಲ್ಲಿ ಭಾಗವಹಿಸಲಿಚ್ಛಿಸುವ ಎಲ್ಲ ಕಾನೂನು ಮಹಾವಿದ್ಯಾಲಯಗಳು, ಇಬ್ಬರು ವಾದ ಮಂಡಿಸುವ ಮತ್ತು ಒಬ್ಬ ಸಂಶೋಧನಾ ವಿದ್ಯಾರ್ಥಿಗಳನ್ನೊಳಗೊಂಡ ಮೂರು ಜನರ ತಂಡವನ್ನು ಸ್ಪರ್ಧೆಗೆ ಕಳುಹಿಸಬೇಕು.
3) ಸ್ಪರ್ಧೆಯು ಪ್ರಾರಂಭವಾಗುವದಕ್ಕಿಂತ ಮುಂಚೆ ಅರ್ಜಿದಾರ ಮತ್ತು ಎದುರುದಾರ ತಂಡಗಳ ಸ್ಪರ್ಧಾ ಪಟ್ಟಿಯನ್ನು ಚೀಟಿ ಎತ್ತುವ ಮೂಲಕ ತಯಾರಿಸಲಾಗುವುದು. ನಂತರದ ಹಂತದ ಸ್ಪರ್ಧೆಗೆ 15 ನಿಮಿಷ ಮುಂಚಿತವಾಗಿ ಸ್ಪರ್ಧಾಪಟ್ಟಿಯನ್ನು ತಯಾರಿಸಲಾಗುವುದು.
4) ಸಂಘಟಕರು ಸ್ಪರ್ಧೆಯಲ್ಲಿ ಭಾಗವಹಿಸಲಿಚ್ಛಿಸುವ ಯಾವುದೇ ತಂಡಗಳ ಪ್ರವಾಸ ಖರ್ಚನ್ನು ನೀಡುವುದಿಲ್ಲ. ಆದರೆ, ಸ್ಪರ್ಧಾ ದಿನಗಳಂದು ಸ್ಪರ್ಧಾಳುಗಳಿಗೆ ಉಚಿತ ಊಟ ಹಾಗೂ ವಸತಿ ಸೌಕರ್ಯಗಳನ್ನು ಕಲ್ಪಿಸಲಾಗುವದು.
5) ಈ ಸ್ಪರ್ಧೆಯನ್ನು ಕನ್ನಡ ಭಾಷೆಯಲ್ಲಿ ನಡೆಸಲಾಗುವದು.
6) ಸ್ಪರ್ಧೆಯಲ್ಲಿ ಭಾಗವಹಿಸಲಿಚ್ಛಿಸುವ ಕಾನೂನು ಮಹಾವಿದ್ಯಾಲಯಗಳು ದಿನಾಂಕ 25/07/2023 ರೊಳಗಾಗಿ ತಮ್ಮ ಭಾಗವಹಿಸುವಿಕೆಯನ್ನು ಗೂಗಲ್ ಫಾರ್ಮ ಲಿಂಕ್ https://forms.gle/Njq2BMSKWKPvGhVA7 ಮೂಲಕ ಖಚಿತಪಡಿಸಬೇಕು.
7) ಕಲ್ಪಿತ ನ್ಯಾಯಾಲಯ ಸ್ಪರ್ಧೆಯ ವಿಷಯ ವಸ್ತುವು ಕೆ.ಎಲ್.ಇ. ಲಾ ಅಕಾಡೆಮಿಯ ಸ್ವತ್ತಾಗಿದ್ದು, ಅದನ್ನು ಅಕಾಡೆಮಿಯ ಪೂರ್ವಾನುಮತಿಯಿಲ್ಲದೆ ಯಾರೂ ಉಪಯೋಗಿಸುವಂತಿಲ್ಲ.
8) ಸ್ಪರ್ಧೆಯಲ್ಲಿ ಭಾಗವಹಿಸಲಿಚ್ಛಿಸುವ ಕಾನೂನು ಮಹಾವಿದ್ಯಾಲಯಗಳು ದಿನಾಂಕ 31/07/2023 ರೊಳಗೆ ಲಗತ್ತಿಸಿದ ನೊಂದಣಿ ಅರ್ಜಿ ಮತ್ತು ಪ್ರಯಾಣ ವಿವರಗಳ ಪತ್ರವನ್ನು ಪೂರ್ಣ ಮಾಹಿತಿಯೊಂದಿಗೆ ಸಲ್ಲಿಸಬೇಕು.
9) ಲಿಖಿತ ವಾದಪತ್ರವನ್ನು ದಿನಾಂಕ : 09-08-2023 ರಂದು ಅಥವಾ ಸದರಿ ದಿನಾಂಕದ ಒಳಗಾಗಿ ಕಛೇರಿಯ ವೇಳೆಯಲ್ಲಿ ಸಲ್ಲಿಸತಕ್ಕದ್ದು (ಪೋಸ್ಟ ಮೂಲಕ)
10) ಮೊದಲು ನೋಂದಾಯಿಸಿಕೊಂಡ 20 ತಂಡಗಳಿಗೆ ಮಾತ್ರ ಪ್ರವೇಶಾವಕಾಶವಿರುತ್ತದೆ.
11) **ಪ್ರವೇಶ ಶುಲ್ಕ:** ಭಾಗವಹಿಸುವ ಪ್ರತಿ ತಂಡಕ್ಕೆ ಪ್ರವೇಶ ಶುಲ್ಕ 2,000/-ರೂಪಾಯಿಯನ್ನು ಈ ಕೆಳಗಿನ ಹೆಸರಿನಲ್ಲಿ ಡಿಡಿ / ಆರ್ ಟಿಜಿಎಸ್/ಎನ್ ಇಎಫ್ ಟಿ ತೆಗೆದು ನೊಂದಣಿ ಪತ್ರದೊಂದಿಗೆ ಮಹಾವಿದ್ಯಾಲಯಕ್ಕೆ ಸಲ್ಲಿಸಬೇಕು.

“Principal, K. L. E. Society’s Law College, Chikodi
Payable at Chikodi”.

Bank Name: Canara Bank,
Account No. **05582200000134**
IFSC Code: **CNRB0010558**
Branch: B.K. College Campus,
Chikodi – 591 201.
Dist: Belagavi.

**ಕಲ್ಪಿತ ನ್ಯಾಯಾಲಯ ಸ್ಪರ್ಧೆಯ ಕೆಲವು ವಿಶೇಷ ಗುಣಲಕ್ಷಣಗಳು:**

1) ಸ್ಪರ್ಧೆಯಲ್ಲಿ ಭಾಗವಹಿಸಲಿಚ್ಛಿಸುವ ಪ್ರತಿ ತಂಡಗಳು ವಾದ ಮತ್ತು ಪ್ರತಿವಾದ ಪತ್ರಗಳನ್ನು ಸಂಘಟಕರಿಗೆ 31-07-2023 ರ ಒಳಗಾಗಿ ಸ್ಪೀಡ್ ಪೋಸ್ಟ್ ಮುಖಾಂತರ ನಾಲ್ಕು ಪ್ರತಿಯಲ್ಲಿ ಸಲ್ಲಿಸಬೇಕು.
2) ಪ್ರತಿ ತಂಡಕ್ಕೆ ಒಟ್ಟು 30 ನಿಮಿಷ ಕಾಲಾವಧಿ ಇದ್ದು, ತಂಡದ ಪ್ರತಿ ಸ್ಪರ್ಧಾಳುವಿಗೆ ವಾದ ಮಂಡಿಸಲು ತಲಾ 15 ನಿಮಿಷ ಕಾಲಾವಕಾಶ ನೀಡಲಾಗುವದು.
3) ಒಟ್ಟು 100 ಅಂಕಗಳ ಆಧಾರದ ಮೇಲೆ ಪ್ರತಿ ತಂಡದ ಸಾಧನೆಯನ್ನು ನಿರ್ಧರಿಸಲಾಗುವದು.
4) ಲಿಖಿತ ವಾದ ಪತ್ರಗಳಿಗೆ ಪ್ರತ್ಯೇಕ 50 ಅಂಕಗಳನ್ನು ನಿಗದಿಪಡಿಸಲಾಗಿದೆ.
5) ಸ್ಪರ್ಧೆಯಲ್ಲಿ ಒಟ್ಟು 4 ಹಂತಗಳಿದ್ದು, ಇದರಲ್ಲಿ ಪ್ರಥಮ ಮತ್ತು ದ್ವಿತೀಯ ನಿರ್ಗಮಿಸುವ ಸುತ್ತು ಹಾಗೂ ಸೆಮಿಫೈನಲ್ ಮತ್ತು ಫೈನಲ್ ಸುತ್ತುಗಳು ಇರುತ್ತವೆ.
6) **ಅ.** ಮೊದಲನೇಯ ನಿರ್ಗಮಿಸುವ ಸುತ್ತು: ಚೀಟಿ ಎತ್ತಿದ ಪ್ರಕಾರ ಎಲ್ಲಾ ತಂಡಗಳು ಈ ಸುತ್ತಿನಲ್ಲಿ ಭಾಗವಹಿಸುತ್ತವೆ.
   **ಬ.** ಎರಡನೇಯ ನಿರ್ಗಮಿಸುವ ಸುತ್ತು: 50% ಅರ್ಜಿದಾರ ಕಡೆಯ ಮತ್ತು 50% ಎದುರುದಾರ ಕಡೆಯ ತಂಡಗಳು ಮೊದಲನೇಯ ನಿರ್ಗಮನದ ಸುತ್ತಿನಲ್ಲಿ ಪಡೆದ ಅಂಕಗಳ ಆಧಾರದ ಮೇಲೆ ಸುತ್ತನ್ನು ತಲುಪುತ್ತಾರೆ.
   **ಕ.** ಸೆಮಿಫೈನಲ್ ಸುತ್ತು: ಎರಡನೇಯ ನಿರ್ಗಮಿಸುವ ಸುತ್ತುನಲ್ಲಿ ಭಾಗವಹಿಸಿದ ಸ್ಪರ್ಧಾಳುಗಳಲ್ಲಿ ಒಟ್ಟು 4 ತಂಡಗಳು ಅವರು ಪಡೆದ ಅಂಕಗಳ ಆಧಾರದ ಮೇಲೆ ಸೆಮಿ ಫೈನಲ್ ತಲಪುತ್ತಾರೆ.
   **ಇ.** ಫೈನಲ್ ಸುತ್ತು: ಸೆಮಿ ಫೈನಲ್‌ನಲ್ಲಿ ಭಾಗವಹಿಸಿದ ಸ್ಪರ್ಧಾಳುಗಳಲ್ಲಿ ಒಟ್ಟು 2 ತಂಡಗಳು ಅವರು ಪಡೆದ ಅಂಕಗಳ ಆಧಾರದ ಮೇಲೆ ಫೈನಲ್ (ಅಂತಿಮ) ಸುತ್ತನ್ನು ತಲಪುತ್ತಾರೆ.

**ಲಿಖಿತ ವಾದ ಪತ್ರಗಳನ್ನು ಸಲ್ಲಿಸುವದಕ್ಕೆ ಸಂಬಂಧಿಸಿದ ನಿಯಮಗಳು:**

1. ಲಿಖಿತ ವಾದ ಪತ್ರಗಳನ್ನು ಬಾಂಡ್ ಪೇಪರಿನ ಒಂದು ಬದಿಯಲ್ಲಿ ಟೈಪ್ ಮಾಡಿ, ಪ್ರತಿ ಸಾಲುಗಳ ನಡುವೆ (ಡಬಲ್ ಸ್ಪೇಸ್ ಲೈನಿಂಗ್) ಅಂತರ ಇರುವಂತೆ ಸಲಿಸತಕ್ಕದ್ದು.
2. ಬರವಣಿಗೆಯು 15 ಪುಟಗಳನ್ನು ಮೀರಿರಬಾರದು. ಅದರಲ್ಲಿ, ಮುಖ ಪುಟ, ಪರಿವಿಡಿ, ಗ್ರಂಥಋುಣ ಪಟ್ಟಿ, ಪ್ರಕರಣಗಳ ಪಟ್ಟಿ, ವಾದಗಳ ಸಾರಾಂಶ ವಿವಾದಾಂಶಗಳು/ಪ್ರಶ್ನೆಗಳು ಹಾಗೂ ಅನುಸೂಚಿಗಳು ಸೇರಿರುವುದಿಲ್ಲ.
3. ಲಿಖಿತ ವಾದ ಪತ್ರಗಳನ್ನು ವ್ಯವಸ್ಥಿತವಾಗಿ ಬೈಂಡ್ (ಜೋಡಣೆ) ಮಾಡಿ ಸಲ್ಲಿಸತಕ್ಕದ್ದು.
4. ಒಂದು ಸಲ ಸಲ್ಲಿಸಿದ ಲಿಖಿತ ವಾದ ಪತ್ರಗಳನ್ನು ಹಿಂದಿರುಗಿಸುವುದಿಲ್ಲ.
5. ಲಿಖಿತ ವಾದ ಪತ್ರಗಳನ್ನು ನಾಲ್ಕು ಪ್ರತಿಗಳಲ್ಲಿ (4+4) ( ನೀಲಿ ಬಣ್ಣದಲ್ಲಿ ಅರ್ಜಿದಾರರು ಮತ್ತು ಕೆಂಪು ಬಣ್ಣದಲ್ಲಿ ಎದುರುದಾರರು ) ಸಲ್ಲಿಸತಕ್ಕದ್ದು.

**ಸಮವಸ್ತ್ರ:** ಭಾರತದ ವಕೀಲ ಪರಿಷತ್ತು ಸೂಚಿಸಿದ ಸಮವಸ್ತ್ರವನ್ನು ಸ್ಪರ್ಧಾಳುಗಳು ಧರಿಸಬೇಕು.

**ಬಹುಮಾನಗಳು:**

1. ವಿಜೇತರು
2. ದ್ವಿತೀಯ ಸ್ಥಾನ
3. ಅತ್ಯುತ್ತಮ ವಾದ ಪತ್ರ
4. ಅತ್ಯುತ್ತಮ ಮಹಿಳಾ ನ್ಯಾಯಾವಾದಿ
5. ಅತ್ಯುತ್ತಮ ಪುರುಷ ನ್ಯಾಯವಾದಿ

**<u>ಸೂಚನೆ:</u>** ಅತ್ಯುತ್ತಮ ಮಹಿಳಾ ನ್ಯಾಯಾವಾದಿ ಮತ್ತು ಅತ್ಯುತ್ತಮ ಪುರುಷ ನ್ಯಾಯವಾದಿ ಬಹುಮಾನಗಳನ್ನು ಆಯ್ಕೆ ಮಾಡುವಾಗ ಪ್ರಥಮ ಸುತ್ತಿನ ವಾದ ಮಂಡನೆಯನ್ನು ಮಾತ್ರ ಪರಿಗಣಿಸಲಾಗುತ್ತದೆ.

**ನೊಂದಣಿ ಪತ್ರ**

ನಾಲ್ಕನೇಯ ರಾಜ್ಯ ಮಟ್ಟದ ಕನ್ನಡ ಕಲ್ಪಿತ ನ್ಯಾಯಾಲಯ ಸ್ಪರ್ಧೆ 12 ಮತ್ತು 13ನೇ ಆಗಸ್ಟ್ - 2023.

**ಹೆಸರು ಮತ್ತು ವಿಳಾಸ/ವಿದ್ಯಾ ಸಂಸ್ಥೆಯ ಹೆಸರು ಹಾಗೂ ಇ-ಮೇಲ್ ಮತ್ತು ದೂರವಾಣಿ ಸಂಖ್ಯೆ**

ವಿದ್ಯಾ ಸಂಸ್ಥೆಯ ಹೆಸರು : ______________________________________________

1. ವಾದ ಮಂಡಿಸುವ ವಿದ್ಯಾರ್ಥಿಯ ಹೆಸರು :
   ತರಗತಿ
   ವಿಳಾಸ : ______________________________

   ______________________________

   ______________________________

   ದೂರವಾಣಿ ಸಂಖ್ಯೆ :______________________________
   ಇ-ಮೇಲ್ :______________________________

   ಭಾವಚಿತ್ರ

2. ವಾದ ಮಂಡಿಸುವ ವಿದ್ಯಾರ್ಥಿಯ ಹೆಸರು :
   ತರಗತಿ
   ವಿಳಾಸ : ______________________________

   ______________________________

   ______________________________

   ದೂರವಾಣಿ ಸಂಖ್ಯೆ :______________________________
   ಇ-ಮೇಲ್ :______________________________

   ಭಾವಚಿತ್ರ

3. ಸಂಶೋಧನಾ ವಿದ್ಯಾರ್ಥಿಯ ಹೆಸರು :
   ತರಗತಿ
   ವಿಳಾಸ : ______________________________

   ______________________________

   ______________________________

   ದೂರವಾಣಿ ಸಂಖ್ಯೆ :______________________________
   ಇ-ಮೇಲ್ :______________________________

   ಭಾವಚಿತ್ರ

ಮಹಾವಿದ್ಯಾಲಯದ ಮುಖ್ಯಸ್ಥರ ಹೆಸರು ಹಾಗೂ ಮೊಹರು

**ಭಾವಚಿತ್ರಗಳನ್ನು ಮಹಾವಿದ್ಯಾಲಯದ ಪ್ರಾಚಾರ್ಯರು ದೃಢೀಕರಿಸಬೇಕು.**

**ಕೆ.ಎಲ್.ಇ. ಸಂಸ್ಥೆಯ ಕಾನೂನು ಮಹಾವಿದ್ಯಾಲಯ.**

**ಚಿಕ್ಕೋಡಿ – 591 201.**

**ಕೆ.ಎಲ್.ಇ. ಕಾನೂನು ಅಕಾಡೆಮಿ, ಬೆಳಗಾವಿ.**

**ನಾಲ್ಕನೇಯ ರಾಜ್ಯಮಟ್ಟದ ಕನ್ನಡ ಕಲ್ಪಿತ ನ್ಯಾಯಾಲಯ ಸ್ಪರ್ಧೆ-2023**



Reg.No. BCI/LE/KLESLC/CKDI/KSLUU/701/2009 ಫೋನ್ ನಂ: 08338(O) 274369

# ಪ್ರಯಾಣ ವಿವರಗಳ ಪತ್ರ

ಭಾಗವಹಿಸುವ ಸಂಸ್ಥೆಯ ಹೆಸರು :______________________________________________

ಭಾಗವಹಿಸುವವರ ಹೆಸರು : ೧.______________________________Mob:______________

೨.______________________________ Mob:_____________

೩.______________________________ Mob:_____________

**ಆಗಮನದ ಪ್ರಯಾಣದ ಮಾರ್ಗಗಳು**

ಆಗಮಿಸುವ ದಿನಾಂಕ : ____________________________________________________

ಪ್ರಯಾಣದ ವಿಧಾನ: ರೈಲ್ವೆ/ವಾಯುಮಾರ್ಗ /ರಸ್ತೆ ಮಾರ್ಗಗಳು : ___________________________

ತಲುಪುವ (ಸಮಯ ಮತ್ತು ಸ್ಥಳ) : _____________________________________________

**ನಿರ್ಗಮನ ವಿವರಗಳು**

ನಿರ್ಗಮನ ದಿನಾಂಕ : _____________________________________________________

ಪ್ರಯಾಣದ ವಿಧಾನ: ರೈಲ್ವೆ/ವಾಯುಮಾರ್ಗ /ರಸ್ತೆ ಮಾರ್ಗಗಳು : ___________________________

ಬಿಡುವ ಸಮಯ : ______________________________________________________

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿರಿ

ಶ್ರೀ. ಎಸ್.ಡಿ. ಶಿರಹಟ್ಟಿ : 9739238804

**ಕಲ್ಪಿತ ನ್ಯಾಯಾಲಯ ಸ್ಪರ್ಧೆಯ ಸಮಸ್ಯೆ**

ಗೌರವಾನ್ವಿತ ಕನ್ನಡಾಂಚಲ ಉಚ್ಚನ್ಯಾಯಾಲಯ, ಬೆಂದಕಾಳೂರು
ಇವರ ಸಮ್ಮುಖದಲ್ಲಿ
ರಿಟ್‌ಅರ್ಜಿ ಸಂಖ್ಯೆ ೧೧೧೨೩೪ / ೨೦೨೩
ಬಿಟ್ಟಿ-ಭಾಗ್ಯಗಳ ವಿರೋಧಿಕ್ರಿಯಾ ಸಮೀತಿ (ರಿ)
ವಿರುದ್ಧ
೧. ಮುಖ್ಯ ಕಾರ್ಯದರ್ಶಿ, ಕನ್ನಡಾಂಚಲ ಸರ್ಕಾರ, ಬೆಂದಕಾಳೂರು
೨. ಅಧ್ಯಕ್ಷರು, ಭಾರತರಾಷ್ಟ್ರೀಯಕಲ್ಯಾಣ ಪಕ್ಷ, ಕನ್ನಡಾಂಚಲ
೩. ಚುನಾವಣಾ ಆಯೋಗ

ಕನ್ನಡಾಂಚಲ ಭಾರತ ಒಕ್ಕೂಟಕ ಒಂದುರಾಜ್ಯ. ಕನ್ನಡಾಂಚಲ ವಿಧಾನಸಭೆಗೆ ಇತ್ತೀಚಿಗೆ ನಡೆದ ಚುನಾವಣೆಯಲಿ ಭಾರತ ರಾಷ್ಟ್ರೀಯ ಕಲ್ಯಾಣ ರಾಜ್ಯ ಅಪಾರ ಜನ ಮನ್ನಣೆಯೊಂದಿಗೆ ಅಧಿಕಾರಕ್ಕೆ ಬರುವದೇ ತಡ, ತನ್ನ ನಾರಿಶಕ್ತಿ ವಾಗ್ದಾಣ ಪೂರೈಕೆಗಾಗಿ ಸರ್ಕಾರಿ ಸಾರಿಗೆಯಲ್ಲಿ ಮಹಿಳೆಯರಿಗೆ ಉಚಿತ ಪ್ರಯಾಣ ಸೌಲಭ್ಯವು ಸಾರ್ವಜನಿಕ ವಲಯದಲ್ಲಿ ಭಾರಿ ಸಂಚಲನ ಸೃಷ್ಟಿಸಿದ್ದು, ರಾಜ್ಯದ ಬಹುತೇಕರು ವಿಭಿನ್ನ ಪ್ರತಿಕ್ರಿಯೆ ನೀಡತೊಡಗಿದ್ದು, ಒಂದರ್ಥದಲ್ಲಿ ಪರ–ವಿರೋಧ ಏನೇ ಇರಲಿ, ಮೊದಲ ಸಲ ರಾಜ್ಯದ ಕಾಳಜಿಯಲ್ಲಿ ಎಲ್ಲರೂ ಭಾಗಿಯಾದಂತಾಗಿದೆ. ಮುಂದುವರೆದು, ಅನ್ನಭಾಗ್ಯ, ಗೃಹಲಕ್ಷ್ಮಿ, ಗೃಹಜ್ಯೋತಿ, ವಿದ್ಯಾನಿಧಿ ಭಾಗ್ಯಗಳನ್ನು ಜಾರಿಗೊಳಿಸಿವೆ.

ಎಲ್ಲರಾಜಕೀಯ ಪಕ್ಷಗಳು ಅಧಿಕಾರದ ಲಾಲಸೆಗಾಗಿ ಕೆಲವರಿಗೆ ಮಾತ್ರ ಪ್ರಾಶಸ್ತ್ಯ, ಅವಕಾಶ, ಸವಲತ್ತು, ರಿಯಾಯಿತಿಕೊಡುವ ಪರಿಪಾಠ ಬಹಳ ಹಿಂದಿನಿಂದಲೇ ನಡೆದುಕೊಂಡು ಬಂದಿದ್ದು, ಟೀಕೆ ಎದುರಾದಾಗಲೆಲ್ಲ ಹಾಗೇ ಕೊಡಮಾಡುವ ಸೌಲಭ್ಯಗಳು ಸಂವಿಧಾನದ ಆಶಯಗಳ ಸಾಕಾರಕ್ಕಾಗಿಯೇ ಎಂಬ ಸಿದ್ದ ಉತ್ತರದ ಮೂಲಕ ವಿರೋಧಿಸುವವರನ್ನು ತಡೆಯಲಾಗುತ್ತಿತ್ತು. ಆದರೆ, ಇತ್ತೀಚೆಗೆ ವಿಶೇಷವಾಗಿ ಸಾಮಾಜಿಕ ಜಾಲತಾಣಗಳ ಮೂಲಕ ವ್ಯಕ್ತವಾಗುತ್ತಿರುವ ಅಭಿಪ್ರಾಯಗಳು ಕ್ಷಣಾರ್ಧದಲ್ಲಿ ವಿಶ್ವದಾದ್ಯಂತ ಪ್ರಕಟವಾಗಿ ಆಗಾಧ ಪರಿಣಾಮ ಬೀರುತ್ತಿವೆ.

ಈ ಹಿನ್ನೆಲೆಯಲ್ಲಿ, ಸಂಘಟಿತವಾದಅರ್ಜಿದಾರ ಸಮಿತಿಯು, ವಿವಿಧರಾಜಕೀಯ ಪಕ್ಷಗಳು ಅಧಿಕಾರ ಪಡೆಯಲು ಮಾಡುವಉಚಿತ ಘೋಷಣೆಗಳ ಜಾರಿಯಿಂದರಾಜ್ಯದಆರ್ಥಿಕ, ಸಾಮಾಜಿಕ ಸ್ಥಿತಿಯ ಮೇಲೆ ಉಂಟಾಗುವ ಪರಿಣಾಮಅಧ್ಯಯನ ಮಾಡಿ, ನಮ್ಮ ನೆರೆಯ ಕೆಲ ರಾಷ್ಟ್ರಗಳು ಆರ್ಥಿಕ ಶಿಸ್ತು ರೂಡಿಸಿಕೊಳ್ಳದೇ, ಅರಾಜಕತೆಯಿಂದ ವಿಫಲವಾದ ದೃಷ್ಟಾಂಶಗಳೆಲ್ಲವನ್ನು ಅವಲೋಕಿಸಿ, ರಾಜ್ಯದ ಅಯ-ವ್ಯಯದಗಾತ್ರ, ಬದಲಾದತೆರಿಗೆ ಸಂಗ್ರಹ ಮತ್ತು ವಿತರಣೆ ನಮೂನೆಯಲ್ಲಿ ಘೊಷಿಸಿದ ಭಾಗ್ಯಗಳು ಜಾರಿಗೊಂಡಲ್ಲಿರಾಜ್ಯವು ವ್ಯತ್ತಿರೀಕ್ತ ಪರಿಣಾಮ ಎದುರಿಸುವುದನ್ನು ತಪ್ಪಿಸಲು, ಉಚ್ಚನ್ಯಾಯಾಲಯದಲ್ಲಿ ಎಲ್ಲ ಬಿಟ್ಟಿ-ಭಾಗ್ಯಗಳ ಜಾರಿಯನ್ನು ಸಾರ್ವಜನಿಕ ಹಿತಾಸಕ್ತಿಅಡಿಯಲ್ಲಿ ಪ್ರಶ್ನಿಸಿ, ತಡೆಹಿಡಿಯಲು ಅರ್ಜಿದಾರ ಸಮಿತಿ ಪ್ರಾರ್ಥಿಸಿದೆ.

**ಅರ್ಜಿದಾರರ ಪರವಾಗಿ**: ಬಿಟ್ಟಿ-ಭಾಗ್ಯಗಳಿಂದ ಅಸಮಾನತೆ ಹೆಚ್ಚಾಗುತಿದ್ದು, ಸಮಾಜದಲ್ಲಿ ತಾರತಮ್ಯ ಉಂಟಾಗಿ, ಶಾಂತಿ-ಸುವ್ಯವಸ್ಥೆಯ ಸಮಸ್ಯೆ ತಲೆದೋರಲಿದೆ. ಜನಸಾಮಾನ್ಯರು ಕ್ರಿಯಾಶೀಲರಾಗಲು ಉಚಿತಗಳು ಅಡ್ಡಿಯಾಗಿ, ಸೋಮಾರಿಗಳಾಗುತ್ತಿದ್ದಾರೆ. ದೇಶದ ಉದ್ಯೋಗವೆನಿಸಿದ ಕೃಷಿಯ ಬಹುತೇಕ ಚಟುವಟಿಕೆಗಳು ಮೂಲೆ ಗುಂಪಾಗುತ್ತಿವೆ. ಕೆಲಸ ಮಾಡದೆ ಜನಸಮೂದಾಯ ಸಮಸ್ಯೆಗಳನ್ನು ಸೃಷ್ಟಿಸುತ್ತದೆ. ಕೆಲವರಿಂದ ಖಡ್ಡಾಯವಾಗಿ ತೆರಿಗೆ ಪಡೆದು, ಸಾರ್ವಜನಿಕ ಸಮ್ಮತಿಯಿಲ್ಲದೇ ಕೆಲವರಿಗೆ ವ್ಯಯಿಸುವುದು ಅಕ್ರಮ. ಸಾಲ ಮಾಡಿಉಚಿತ ಸೌಲಭ್ಯ ನೀಡುವುದು ಸಂವಿಧಾನ ವಿರೋಧಿ.ಉಚಿತ ಸೌಲಭ್ಯಗಳಿಗೆ ಅಪಾರ ಹಣ ಬಳಸಿದಾಗ ಶಿಕ್ಷಣ, ರಸ್ತೆ, ನೀರು, ವಸತಿಯಂತಹ ಅವಶ್ಯಕತೆಗಳನ್ನು ಪೂರೈಸಲಾಗಲಾಗದು. ಮಿಗಿಲಾಗಿ, ಚುನಾವಣಾ ಪೂರ್ವಉಚಿತ ಸೌಲಭ್ಯಗಳ ಘೋಷಣೆ ಮತ್ತು ನಂತರ ಅವುಗಳ ಜಾರಿಯುಚುನಾವಣಾ ಸಂದರ್ಭದಲ್ಲಿ ಮತದಾರಿಗೆ ಒಡ್ಡುವ ಅಮೀಷವೆಂಬತಾಗಿ, ಜನ ಪ್ರತಿನಿಧಿಗಳ ಕಾಯ್ದೆಯ ಉಲ್ಲಂಘಣೆಯಾಗಿದೆ ಇತ್ಯಾದಿ ಅಂಶಗಳನ್ನು ಪ್ರತಿಪಾದಿಸಲಾಗಿದೆ.

**ಎದುರುದಾರರ ಪರವಾಗಿ**: ಪ್ರಜಾತಂತ್ರ ಉದ್ದೇಶವೇ ಸರ್ವರಿಗೂ ಸಮಾನ ಅವಕಾಶ ಮತ್ತು ಸೌಲಭ್ಯಗಳನ್ನು ಸೃಷ್ಟಿಸುವುದು. ಸೌಲಭ್ಯಗಳ ಜಾರಿ ಮೂಲಕ ರಾಜನಿರ್ದೇಶಕ ತತ್ವಗಳ ಸಾಕಾರದ ನಿಟ್ಟಿನಲ್ಲಿ ಸರ್ಕಾರ ಕಾರ್ಯ ನಿರ್ವಹಿಸುತ್ತಿದೆ. ಉಳ್ಳವರು, ಅದರಲ್ಲೂ ಉದ್ದಿಮೆದಾರರು ಹಲವಾರು ಸವಲತ್ತುಗಳನ್ನು ಪಡೆದು, ಅಪಾರ ಸ್ವತ್ತು ಕ್ರೋಡಿಕರಿಸಿ, ಅಸಹಾಯಕ ವರ್ಗ ನಿರ್ಮಾಣವಾಗುವುದನ್ನು ತಡೆಯುವ ಸಂದರ್ಭ ಉಂಟಾಗಿದೆ. ಬಿಟ್ಟಿ, ಭಿಕ್ಷೆಯೆಂಬ ಶಬ್ದ ಬಳಕೆಯೇ ಅವಮಾನಕಾರಿಯಾಗಿದ್ದು, ಮಾನಸಿಕ-ದೈಹಿಕ ಶ್ರಮಗಳಿಗೆ ಸರಿಯಾದ ಪ್ರತಿಫಲ ದೊರೆಯುತ್ತಿಲ್ಲವಾದ್ದರಿಂದ ಸಮಾಜದಲ್ಲಿ ಉಂಟಾಗುತ್ತಿರುವ ಭಾರಿ ಕಂದಕವನ್ನು ಸೌಲಭ್ಯಗಳ ಮೂಲಕ ತೊಡೆದು ಹಾಕುವುದು ಯಾವುದೇ ಜವಾಬ್ದಾರಿ ಸರ್ಕಾರದ ಕರ್ತವ್ಯ ಕೂಡ. ಅಸಮಾನ ಆರ್ಥಿಕ ಸಂರಚನೆಯ ಸಮಸ್ಯೆಯನ್ನು ಸರಿದೂಗಿಸಲು ಆಡಳಿತವು ವಿನೂತನ ಕ್ರಮವಹಿಸಲೇಬೇಕು. ಉಂಡವನಿಗೆ ಹಸಿದವನ ವೇದನೆ ಅರ್ಥವಾಗದು. ಹೀಗಾಗಿ, ಅರ್ಜಿದಾರರಂತಹ ಕೆಲವು ಹಿತಾಸಕ್ತಿಗಳ ಪ್ರತಿಭಟಣೆ ವಿವೇಕರಹಿತವಾಗಿದೆ.

ರಿಟ್‌ಅರ್ಜಿಯು ಅಂತಿಮ ವಿಚಾರಣಾ ಹಂತದಲ್ಲಿದ್ದು, ಮೊಕದ್ದಮೆಯಲ್ಲಿ ಸಾರ್ವಜನಿಕ ಹಿತಾಸಕ್ತಿ ಅಡಗಿದೆಯೇ? ನ್ಯಾಯಾಲಯ, ಅರ್ಜಿದಾರರ ಕೋರಿಕೆಯನ್ನು ಮಾನ್ಯ ಮಾಡಬಹುದೇ? ಮುಂತಾದ ವಿವಾದಾಂಶಗಳ ಜೊತೆ ಪ್ರಸ್ತಾಪಿತ ವಿಷಯಗಳ ಕುರಿತಾಗಿಯೂ ವಾದ ಮಂಡನೆಯಾಗಬೇಕಿದೆ.

***********************************

ರಾಜ್ಯ ಮಟ್ಟದಕನ್ನಡಕಲ್ಪಿತ ನ್ಯಾಯಾಲಯ ಸ್ಪರ್ಧೆಗಾಗಿ

ಕಲ್ಪಿತ ಸಂಗತಿ ಲೇಖಕರು : ಬಸವಪ್ರಭು ಹೊಸಕೇರಿ, ನ್ಯಾಯವಾದಿ, ಧಾರವಾಡ